

# ನವಿರು ಪ್ರೇಮದ ದಾರಿಯಲ್ಲಿ ಸಸ್ಪೆನ್ಸ್ ಹಂಪ್

**ಕ್ಲೈಮಾಕ್ಸ್‌ನಲ್ಲಿ ಸಸ್ಪೆನ್ಸ್ ಸ್ಫೋಟಗೊಳಿಸುವ ಕಾರಣಕ್ಕಷ್ಟೇ ಅಲ್ಲ, ಅಂತ್ಯದೆಡೆಗೆ ಸಾಗುವ ದಾರಿಯಲ್ಲಿನ ನವಿರು ಪ್ರೇಮಕತೆಯಿಂದಲೂ 'ಮಾಸ್ಟರ್ ಪೀಸ್' ಕಿರುಚಿತ್ರ ಗಮನಸೆಳೆಯುತ್ತದೆ.**

■ ಗೌರಿ

ಅವನೊಬ್ಬ ಕಲಾವಿದ. ಕಫೆಯಲ್ಲಿ ಕುಳಿತುಕೊಂಡು ತನ್ನಷ್ಟಕ್ಕೆ ತನಗೆ ವಿಶಿಷ್ಟವೆನಿಸಿದ ಮುಖಗಳ ಸ್ಕೆಚ್ ಮಾಡುತ್ತಿರುತ್ತಾನೆ. ಹಾಗೊಮ್ಮೆ ರಂಗಭೂಮಿ ಕಲಾವಿದೆಯೊಬ್ಬಳ ಸ್ಕೆಚ್ ಮಾಡಿದಾಗ ಸಿಕ್ಕಿಬೀಳುತ್ತಾನೆ. ಆ ಮುಖಾಮುಖಿ ಅವಳ ಜೊತೆಗಿನ ಸ್ನೇಹ ಸಂಬಂಧ ಕುದುರಿಕೊಳ್ಳಲೂ ಕಾರಣವಾಗುತ್ತದೆ. ಕೊನೆಗದು ನಿಧಾನಕ್ಕೆ ಪ್ರೇಮದ ದಾರಿಗೆ ಹೊರಳಿಕೊಳ್ಳುತ್ತದೆ. ಅವನ ಸ್ಟುಡಿಯೊದಲ್ಲಿ ರಾಶಿ ರಾಶಿ ಪೇಂಟಿಂಗ್‌ಗಳ ಮಧ್ಯೆ ಒಂದು ಖಾಲಿ ಕ್ಯಾನ್ವಾಸ್ ಇದೆ. ಅವನೇ ಹೇಳುವಂತೆ ಅದು ಅವನ ಮಾಸ್ಟರ್ ಪೀಸ್. ಆ ಚಿತ್ರ ಅವನ ಮನಸಲ್ಲಿದೆ; ಆದರೆ ಕ್ಯಾನ್ವಾಸ್ ಮೇಲೆ ಮೂಡುತ್ತಿಲ್ಲ. ಯಾವುದು ಆ ಮಾಸ್ಟರ್ ಪೀಸ್? ಅದನ್ನು ಅವನು ಬಿಡಿಸಲು ಯಶಸ್ವಿಯಾಗುತ್ತಾನೆಯೇ? ಇದು 'ಮಾಸ್ಟರ್ ಪೀಸ್' ಚಿತ್ರದ ಕಿರುಚಿತ್ರದ ಕ್ಲೈಮಾಕ್ಸ್.

ರಾಕ್ಷಸನ ಪ್ರಾಣ ಗಿಣಿಮರಿಯಲ್ಲಿರುವ ಹಾಗೆ ಸಸ್ಪೆನ್ಸ್ ಸಿನಿಮಾಗಳ ಆತ್ಮ ಇರುವುದು ಕ್ಲೈಮಾಕ್ಸ್‌ನಲ್ಲಿಯೇ. ಹಾಗಾಗಿ ಕೊನೆಯ ಗುಟ್ಟಿನ ಗಂಟನ್ನು ಬಿಚ್ಚಿಟ್ಟರೆ ನೋಡುವ ಮಜಾ ಉಳಿಯುವುದಿಲ್ಲ.

ಹಾಗೆಂದು 'ಮಾಸ್ಟರ್ ಪೀಸ್'ನ ಅಂತ್ಯ ನಿಮಗೇನೋ ಮಹಾ ಸರ್ಪ್ರೈಸ್ ಕೊಡುತ್ತದೆ ಎಂದುಕೊಂಡರೆ ತಪ್ಪು. ಸಸ್ಪೆನ್ಸ್ ಕಥೆಗೆ ಬೇಕಾಗುವ ಹಾಗೆ ಒಂದು ಅಂತ್ಯ ಇಲ್ಲಿದೆ. ಆದರೆ ಅದು ನಿಮಗೆ ದೊಡ್ಡ ಶಾಕ್ ಕೊಡುವುದಿಲ್ಲ. ಬೆಚ್ಚಿ ಬೀಳಿಸುವುದಿಲ್ಲ. ಯಾಕೆಂದರೆ ಇಂಥ ಹಲವು 'ಅಂತ್ಯ'ಕಥನಗಳು ಈಗಾಗಲೇ ಬಂದಿದೆ. ಈ ಕಿರುಚಿತ್ರದ ಜೀವಾಳ ಇರುವುದು ಕೊನೆಯಲ್ಲಷ್ಟೇ ಅಲ್ಲ; ಅದರ ಮುನ್ನಿನ ಪ್ರೇಮಕಥನದಲ್ಲಿಯೂ.



**ಹೆಸರು:** ಮಾಸ್ಟರ್ ಪೀಸ್
**ನಿರ್ದೇಶನ:** ರಾಜೀವ ಬರ್ನವಾಲ್
**ನಿರ್ಮಾಣ:** ಪ್ರಿಯಾಂಕಾ ಪಿ.
**ಧ್ವನಿ ವಿನ್ಯಾಸ:** ಮನೋಜ್ ಸಿಕ್ಕಾ
**ಸಂಗೀತ:** ಸೂಜಿತ್, ಸುಮಂತಾ
**ಸಂಕಲನ:** ಅನಂತ್ ರತಿ
**ತಾರಾಗಣ:** ಅಕ್ಷಯ್ ಒಬೆರಾಯ್, ಸಿಮ್ರತ್ ಕೌರ್

ಕಲಾವಿದನೊಬ್ಬ ನಟಿಯೊಬ್ಬಳನ್ನು ಭೇಟಿಯಾಗಿ ಅವರ ನಡುವೆ ಪ್ರೇಮ ಕಣ್ಣಾಮುಚ್ಚಾಲೆಯಾಟವಾಡುತ್ತ ತೆರೆದಂತೆ ತೋರಿ ಮುಚ್ಚುವ, ಮುಚ್ಚದಂತಾಗಿ ತೆರೆದುಕೊಳ್ಳುವ ಪರಿ ಹದವಾಗಿ ಮೂಡಿದೆ. ಹಾಗಾಗಿ ಈ ಕಿರುಚಿತ್ರದ ಅಂತ್ಯಕ್ಕಿಂತಲೂ ಮೊದಲಿನ ಪ್ರೇಮದ ನವಿರುಭಾವವೇ ನಮ್ಮ ಮನಸಲ್ಲಿ ಉಳಿಯುತ್ತದೆ.

ಮುಖ್ಯಭೂಮಿಕೆಯಲ್ಲಿ ನಟಿಸಿರುವ ಅಕ್ಷಯ್ ಒಬೆರಾಯ್ ಮತ್ತು ಸಿಮ್ರತ್ ಕೌರ್ ಅವರ ಕಣ್ಣಚಲನೆಯೂ ತಪ್ಪಿಹೋಗದಂತೆ ಸೆರೆಹಿಡಿದ ಛಾಯಾಗ್ರಹಣ ಮತ್ತು ಆ ದೃಶ್ಯಗಳನ್ನು ನವಿರುಭಾವದ ಫ್ಲೇವರ್‌ನಲ್ಲಿ ಅದ್ದಿ ತೆಗೆಯುವ ಹದವಾದ ಸಂಗೀತ ಈ ಚಿತ್ರದ ಒಟ್ಟಾರೆ ಪರಿಣಾಮಕ್ಕೆ ನೀಡಿದ ಕೊಡುಗೆ ದೊಡ್ಡದು. ಕಲಾವಿದನಾಗಿ ಅಕ್ಷಯ್ ಮತ್ತು ಪ್ರೇಮದ ಭಾವದಲ್ಲಿ ನಾಚುತ್ತಲೇ ಅರಳುವ ಹುಡುಗಿಯಾಗಿ ಸಿಮ್ರತ್ ಕೌರ್ ನಟನೆಯೂ ಗಮನಸೆಳೆಯುತ್ತದೆ.

ಒಟ್ಟಾರೆ, ಹೆಚ್ಚೇನೂ ಕಾಡದ, ಸುಮ್ಮನೇ ಸುಳಿದು ಹೋಗುವ ತಂಗಾಳಿಯಂಥ ಈ ಕಿರುಚಿತ್ರವನ್ನು ನಾವೂ ನೋಡಿ ಸುಮ್ಮನಾಗಬಹುದು.

ಈ ಕಿರುಚಿತ್ರ ವೀಕ್ಷಣೆಗೆ bit.ly/2LeXT9C ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.